(ಕೆಸಿಪಿಯ ಮಾನ್ಯ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಲ್. ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಸಭಾತ್ಯಾಗವನ್ನು ಮಾಡುವುದಿಲ್ಲ, ಧರಣಿ ಕುಳಿತುಕೊಳ್ಳುವುದೂ ಇಲ್ಲ. ಸರಕಾರ ಈ ಬಗ್ಗೆ ತೆಗೆದುಕೊಂಡ ಕ್ರಮ ಸರಿಯಾಗಿದೆ ಎಂದು ಹೇಳಬಯಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

5. 1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

+ **ಶ್ರೀ ಆರ್. ಶ್ರೀನಿವಾಸ (ಮುಳಬಾಗಿಲು)** :- ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಇದ್ದೇನೆ. ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದು ಒಂದು ವರ್ಷ 7 ತಿಂಗಳುಗಳಾದರೂ ಕೂಡ ಅಲ್ಪಾವಧಿಯಲ್ಲಿಯೇ ಅತ್ಯುತ್ತಮವಾದ ಕೆಲಸಕಾರ್ಯಗಳನ್ನು ಮಾಡಿದೆ. ಅವುಗಳಲ್ಲಿ ಪ್ರಮುಖವಾಗಿ ನಾನು ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಹೇಳಬಯಸುತ್ತೇನೆ. ಹೋದ ವರ್ಷ ಸರಕಾರ ವಿದ್ಯುಚ್ಛಕ್ತಿ ವಿಚಾರದಲ್ಲಿ ಅನುಭವಿಸಿದ ಕಷ್ಟವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಕಳೆದ ಹತ್ತು ವರ್ಷಗಳಿಂದ ಈ ವಿದ್ಯುಚ್ಛಕ್ತಿಯ ಇಲಾಖೆಯ ಬಗ್ಗೆ ಸರಕಾರಗಳು ತೋರಿದ ನಿರ್ಲಕ್ಷತೆ ಯಿಂದಾಗಿ ಹೋದ ವರ್ಷ ಭಾರಿ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಕಡಿತಕ್ಕೆ ಕಾರಣ ವಾಯಿತು. ಆದರೆ ನಮ್ಮ ಸರಕಾರ ಬಂದ ತತ್‌ಕ್ಷಣವೇ ವಿದ್ಯುಚ್ಛಕ್ತಿ ಉತ್ಪಾದನೆಯ ಕುರಿತಾದ ಅನೇಕ ಯೋಜನೆಗಳನ್ನು ಪ್ರಾರಂಭ ಮಾಡಲು ಕ್ರಮಕ್ಕೆಗೊಂಡಿತು. ಈ ಕುರಿತಾಗಿ ಸುಮಾರು 30 ಕೋಟಿ ವೆಚ್ಚದ 18 ಯೋಜನೆಗಳನ್ನು ಪ್ರಾರಂಭ ಮಾಡಲು ಕ್ರಮವನ್ನು ತೆಗೆದುಕೊಂಡಿದ್ದಾರೆ. 5500 ಮೆಗಾವ್ಯಾಟ್ ವಿದ್ಯುತ್ ಚ್ಛಕ್ತಿ ಉತ್ಪಾದನಾ ಯೋಜನೆಯನ್ನು 30 ಕೋಟಿ ರೂ. ಗಳ ವೆಚ್ಚದಲ್ಲಿ ಪ್ರಾರಂಭ ಮಾಡುತ್ತಾ ಇದ್ದಾರೆ. ರೈತರ ಪಂಪ್‌ಸೆಟ್‌ಗಳಿಗೆ, ಗೃಹಬಳಕೆ ವಿದ್ಯುತ್‌ಗೆ, ಹೆಚ್‌ಟಿಎಗಳಿಗೂ ಕೂಡ ದರವನ್ನು ಹೆಚ್ಚು ಮಾಡಿದ ಬಗ್ಗೆ ವಿರೋಧ ಪಕ್ಷದವರು ಟೀಕೆ ಮಾಡಿದ್ದಾರೆ. ಹೀಗೆ ಸರಕಾರ ದವರು ಏತಕ್ಕಾಗಿ ಬೆಲೆಯನ್ನು ಹೆಚ್ಚಿಸಿದ್ದಾರೆ ಎಂದರೆ ಈಗ ನಮ್ಮ ಉತ್ಪತ್ತಿ 3540 ಮೆಗಾವ್ಯಾಟ್ಸ್ ಮಾತ್ರ ಇದ್ದು ನಮ್ಮ ರಿಕ್ವಾಯರ್‌ಮೆಂಟ್ 9000 ಮೆಗಾವ್ಯಾಟ್ಸ್ ಇರುವುದರಿಂದಾಗಿ, ಇದನ್ನು ಹೆಚ್ಚು ಉತ್ಪಾದನೆ ಮಾಡಬೇಕಾದರೆ ಇದಕ್ಕೆ ಆಗತಕ್ಕಂಥ ಖರ್ಚು 30 ಕೋಟಿಗಳಾಗುವ ಪ್ರಯುಕ್ತ ಇರುವ ಬೆಲೆಯನ್ನು ಹೆಚ್ಚು ಮಾಡುವಂಥ ಸಂದರ್ಭ ಬಂತು. ನಮ್ಮ ಸರಕಾರ 1995-96 ರಲ್ಲಿ 1070 ಕೋಟಿ ವಿದ್ಯುತ್‌ನ್ನು ಖರೀದಿ ಮಾಡಿದೆ. ಪ್ರತಿದಿನ 60 ಲಕ್ಷ ರೂ. ಗಳ ವಿದ್ಯುತ್‌ನ್ನು ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಿಂದ ಪಡೆಯುತ್ತಾ ಇದ್ದೇವೆ. ಆದುದರಿಂದ ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅನು ಷ್ಠಾನಗೊಳಿಸಬೇಕಾದರೆ ಈ ವಿದ್ಯುತ್ ದರವನ್ನು ಏರಿಸಲೇಬೇಕಾದ ಸಂದರ್ಭ ಇದೆ. ಈಗ ವಿರೋಧ ಪಕ್ಷದವರು ಟೀಕೆ ಮಾಡತಕ್ಕಂಥ ಸಂದರ್ಭ ಅಂದರೆ, ಪಂಪ್‌ಸೆಟ್ ಗಳಿಗೆ ವಿಧಿಸಿದ ಬೆಲೆಯ ಬಗ್ಗೆ. ಆದರೆ ನಾನು ಹಳ್ಳಿಗಾಡಿನಲ್ಲಿ ಭೇಟಿ ನೀಡಿದ